ಪಡೆಯಲು ವಿಳಂಬವಾಗಿದೆ. ಆದಾಗ್ಯೂ ಕಳೆದ ಒಂದು ತಿಂಗಳಿಂದ ಅಸ್ಫಾಲಟ್ ಸರಬರಾಜು ಲಭ್ಯವಾಗಿದ್ದು ವಾರಕ್ಕೆ ಎರಡು ಸಾರಿ ಅಸ್ಫಾಲಟ್ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ಪಡೆಯುತ್ತಲಿದೆ. ರೂ. 14.5 ಲಕ್ಷ ಮುಂಗಡ ಹಣವನ್ನು 261 ಮೆಟ್ರಿಕ್ ಟನ್ ಅಸ್ಫಾಲಟ್ ಬೇಡಿಕೆ ಪಾವತಿಸಿದೆ. ಈಗಾಗಲೇ 131 ಮೆಟ್ರಿಕ್ ಟನ್ ಅಸ್ಫಾಲಟ್ ಬಂದಿದ್ದು, ಕಾಮಗಾರಿಗಳು ಸಾಗುತ್ತಿವೆ. ಈ ಅಸ್ಫಾಲಟ್ ಕೊರತೆಯಿಂದಾಗಿ ಯಾವುದೇ ಅನುದಾನ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಲಾಗಿದೆ.

11.50 ಎ.ಎಂ

4) ವೃತ್ತಿ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಸಭಾಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರಲ್ಲಿ, ಕಳೆದ ಬಾರಿ ಈ ರಾಜ್ಯದ ವೃತ್ತಿ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ಮಾಡುವುದಿಲ್ಲ ಎಂದು ಸರ್ಕಾರ ಪ್ರಥಮಹಂತದಲ್ಲಿ ಹೇಳಿಕೆಯನ್ನು ನೀಡಿ ಕೊನೆ ಗಳಿಗೆಯಲ್ಲಿ ಧಿಡೀರಾಗಿ ಪ್ರವೇಶ ಪರೀಕ್ಷೆಯನ್ನು ಜರುಗಿಸಿ ವಿದ್ಯಾರ್ಥಿಗಳಲ್ಲಿ ಸಾಕಷ್ಟು ಗೊಂದಲವನ್ನು ಉಂಟುಮಾಡಿ ಅವರ ಭವಿಷ್ಯಕ್ಕೆ ಮಾರಕವಾಗುವಂತಾಗಿದೆ. 1996-97ರಲ್ಲಿ ವೃತ್ತಿ ಶಿಕ್ಷಣಕ್ಕೆ ಅರ್ಜಿ ಹಾಕುವ ವಿದ್ಯಾರ್ಥಿಗಳಿಗೆ ಪ್ರವೇಶಪರೀಕ್ಷೆ ಮಾಡುವ ಇರದೆ ಸರ್ಕಾರಕ್ಕೆ ಇದೆಯೇ? ಇದೆ ಎಂದಾದಲ್ಲಿ ಸಾಕಷ್ಟು ಮುಂದಾಗಿಯೇ ದಿನಾಂಕವನ್ನು ಪ್ರಕಟಿಸುದಲ್ಲಿ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲವಾಗುವುದು ಸರ್ಕಾರದ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕೆಂದು ವಿನಂತಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಪ್ರವೇಶ ಪರೀಕ್ಷೆಯನ್ನು ಮಾಡುವ ಬಗ್ಗೆ ಕಳೆದ ವರ್ಷ ಕೆಲವು ನಿಯಮಾವಳಿಗಳನ್ನು ತಿದ್ದುಪಡಿ ಮಾಡಿದ್ದೇವೆ. ಅದರ ಜೊತೆಗೆ ಕೋರ್ಟಿನಿಂದ ಬಂದ ತೀರ್ಪುಗಳ ಪ್ರಕಾರ ಸ್ವಲ್ಪ ತಡವಾಗಿದೆ. ಈಗಾಗಲೇ ಈ ವರ್ಷ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಈಗ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯು ಇಷ್ಟರಲ್ಲೆ ತೀರ್ಮಾನವನ್ನು ಮಾಡಿ ವೇಳಾಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಈ ವರ್ಷ ಏನು ವಿಳಂಬವಾಗುವುದಿಲ್ಲ.

5) 1993-94 ಮತ್ತು 1994-95ರ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ ಹಣಪಾವತಿ ಮಾಡುವ ಕುರಿತು

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಿಗೆ 93-94 ಮತ್ತು 94-95ರ ಮನೆಗಳಿಗೆ ಪೂರ್ಣಗೊಳ್ಳದೆ ಇರುವುದರಿಂದ ಫಲಾನುಭವಿಗಳು ಗ್ರಾಮದಿಂದ ತಾಲ್ಲೂಕಿಗೆ ಪರದಾಡಬೇಕಾದಂಥ ಪರಿಸ್ಥಿತಿ ಬಂದಿದೆ. ಹಿಂದಿನ ಸರ್ಕಾರ ಮಂಜೂರು ಮಾಡಿದ ಫಲಾನುಭವಿಗಳು ಎಂಬ ಒಂದು ಕಾರಣದಿಂದ ಆರ್ಥಿಕವಾಗಿ ಹಿಂದುಳಿದ ಫಲಾನುಭವಿಗಳಿಗೆ ಕಿರುಕುಳ ಕೊಡುವುದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ ಅಥವಾ ಒಳ್ಳೆಯ ಸಂಪ್ರದಾಯವೂ ಅಲ್ಲ, ಅದೂ ಅಲ್ಲದೆ ಹಿಂದಿನ ಸರ್ಕಾರ ಮಂಜೂರು ಮಾಡಿರತಕ್ಕಂಥ ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರ ಇನ್ನಾದರೂ ಹಿಂದಿನ ಮತ್ತು ಇಂದಿನ ಮಂಜೂರಾದಂಥ ಎಲ್ಲ ಮನೆಗಳಿಗೆ ಸಕಾಲದಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,

ರಾಜ್ಯದ ವಿವಿಧ ವಸತಿ ಯೋಜನೆಗಳಾದ ಆಶ್ರಯ, ಡಾ॥ ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಗಳಿಗೆ ಬಿಡುಗಡೆಯಾದ ಹಣದ ವಿವರಗಳು ಕೆಳಕಂಡಂತಿದೆ. ದಕ್ಷಿಣ ಕನ್ನಡಕ್ಕೆ ಪ್ರತ್ಯೇಕವಾಗಿ ತೋರಿಸಲಾಗಿದೆ.

(ಲಕ್ಷ ರೂ.ಗಳಲ್ಲಿ)

		1993-94	1994-95	1995-96
1)	ಆಶ್ರಯ	14,228.00	1591.00	2300.00
2)	ಡಾ॥ ಅಂಬೇಡ್ಕರ್	3,820.00	1875.00	3230.00
3)	ಇಂದಿರಾ ಆವಾಸ್	1,785.00	1819.00	3024.00
ದಕ್ಷಿಣ ಕನ್ನಡ ಜಿಲ್ಲೆ :				
1)	ಆಶ್ರಯ	1,150.00	83.00	438.00
2)	ಡಾ॥ ಅಂಬೇಡ್ಕರ್	297.90	128.55	221.00
3)	ಇಂದಿರಾ ಆವಾಸ್	58.00	58.00	94.00

ಆಶ್ರಯ ಯೋಜನೆಯಡಿ 1993-94ನೇ ಸಾಲಿನವರೆಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ. 1994-95ನೇ ಸಾಲಿನ ಸೆಪ್ಟೆಂಬರ್‌ತಿಂಗಳಲ್ಲಿ ಮಾರ್ಪಡಿಸಿ 1,50,000 ಆಶ್ರಯ ಮನೆಗಳ ಗುರಿ 60,000ಕ್ಕೆ ಮಿತಗೊಳಿಸಿ ಅದಕ್ಕೆ ಬೇಕಾಗುವ ಪೂರ್ಣ ಹಣವನ್ನು ಈ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಡಾ॥ ಅಂಬೇಡ್ಕರ್ ವಸತಿ ಯೋಜನೆಗೆ 1994-95ನೇ ಸಾಲಿನವರೆಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ. 1995-96ನೇ ಸಾಲಿಗೆ ಪೂರ್ಣ ಹಣ ಬಿಡುಗಡೆ ಮಾಡಲಾಗುವುದು.

ಇಂದಿರಾ ಆವಾಸ್ ಯೋಜನೆಗೂ ಸಹ 1994-95ನೇ ಸಾಲಿನವರೆಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದ್ದು 1995-96ನೇ ಸಾಲಿಗೆ ಬೇಕಾಗುವ ಹಣವನ್ನು ಈ ವರ್ಷಾಂತ್ಯದೊಳಗೆ ಬಿಡುಗಡೆ ಮಾಡಲಾಗುವುದು.

6) ಮಂಗಳೂರು ಮಹಾನಗರ ಪಾಲಿಕೆಯ ನಾಗರೀಕರ ವಸತಿ ಸಮಸ್ಯೆ

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಸಭಾಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯ ನಾಗರೀಕರ ಬೃಹತ್ ಸಮಸ್ಯೆಯೆಂದರೆ ವಸತಿ ಸಮಸ್ಯೆಯೆ ಆಗಿದೆ. ಹಲವು ಸಾವಿರ ಕುಟುಂಬಗಳಿಗೆ ತಮ್ಮದೇ ಆದ ಮನೆ ಇಲ್ಲ, ಈಗಿನ ದರದ ಮೌಲ್ಯದಲ್ಲಿ ನಿವೇಶನವನ್ನು ಕೊಳ್ಳುವ ಚೈತನ್ಯವೂ ಅವರಲ್ಲಿ ಇಲ್ಲ, ಬಾಡಿಕೆ ಮನೆಗಳಿಂದ ಬಿಡಿಸಲ್ಪಡುವವರು ಇದೀಗ ಅಸಹಾಯ ಸ್ಥಿತಿಯಲ್ಲಿ ಇದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವೇ ವಸತಿ ನಿವೇಶನವನ್ನು ತುಮಕೂರು, ಕೆಂಜಾರು, ಬೈಕೆಂಪಾಡಿ ಮತ್ತು ಪಣಂಬೂರು ಗ್ರಾಮಗಳಲ್ಲಿ ಇರುವ ಸುಮಾರು ನಾಲ್ಕು ನೂರು ಎಕರೆಗೆ ಮಿಕ್ಕಿರುವ ರಾಜ್ಯ ಸರ್ಕಾರದಲ್ಲಿ ಅಭಿವೃದ್ಧಿಪಡಿಸಿ ಸುಮಾರು ಐದು ಸಾವಿರ ಕುಟುಂಬಗಳಿಗೆ ನಿವೇಶನಗಳನ್ನು ಉಚಿತವಾಗಿ ವಿತರಿಸಬೇಕೆಂದು ಕರ್ನಾಟಕ ರಾಜ್ಯಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ....

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 41,835 ನಿವೇಶನರಹಿತ ಹಾಗೂ 36,665 ಮನೆ ರಹಿತರನ್ನು 1995 ಮೇ ತಿಂಗಳಲ್ಲಿ ನಡೆಸಿದ ಸರ್ವೇಕ್ಷಣೆಯಲ್ಲಿ ಗುರುತಿಸಲ್ಪಟ್ಟಿರುತ್ತಾರೆ.